
ಕೇಸ್ ನಂಬರ್ ಒಂದು: ಸರ್ಕಾರಿ ಶಾಲೆಯ ಅಧ್ಯಾಪಕಿ ಮುಂದೆ ಬಂದು ನ್ಯಾಯಪೀಠಕ್ಕೆ ಕೈ ಮುಗಿದು 'ಮಹಾಸ್ವಾಮಿಗಳೇ ಘಟನೆ ನಡೆದು ಹತ್ತು ವರ್ಷಗಳಾದವು. ಶಾಲೆಯ ಮಕ್ಕಳನ್ನು ಕರೆದುಕೊಂಡು ರಸ್ತೆ ದಾಟುತ್ತಿದ್ದೆ. ಮಂತ್ರಿಯ ಮಗ ಅತಿ ವೇಗದಿಂದ ಕಾರನ್ನು ನುಗ್ಗಿಸಿದ. ಐದು ಮಕ್ಕಳು ಸ್ಥಳದಲ್ಲೇ ಅಸುನೀಗಿದವು. ನನ್ನ ಎರಡು ಕಾಲುಗಳು ಮುರಿದುಹೋದವು. ಪ್ಲಾಸ್ಟಿಕ್ ಕಾಲುಗಳನ್ನು ಜೋಡಿಸಿಕೊಂಡು ಬಂದಿದ್ದೇನೆ. ಇದುವರೆಗೂ ಸತ್ತ ಮಕ್ಕಳ ಕುಟುಂಬಕ್ಕಾಗಲೀ ನನಗಾಗಲೀ ಒಂದು ನಯಾಪೈಸೆಯ ಪರಿಹಾರ ಸಿಕ್ಕಿಲ್ಲ. ಆತನಿಗೆ ಶಿಕ್ಷೆಯಾಗಿಲ್ಲ. ದಯವಿಟ್ಟು ನ್ಯಾಯ ಕೊಡಿಸಿ ಪ್ರಭು...' ಕಣ್ಣಲ್ಲಿ ನೀರು ಹಾಕಿಕೊಂಡು ಬೇಡಿಕೊಂಡಿದ್ದರು. ಆಗ ನ್ಯಾಯವಾದಿಗಳೊಬ್ಬರು ಮುಂದೆ ಬಂದು ನುಡಿದರು. 'ನಾನು ಇದನ್ನು ಒಪ್ಪುವುದಿಲ್ಲ ಮಹಾಸ್ವಾಮಿಗಳೇ. ಮಂತ್ರಿ ಮಗ ಪಬ್ ಒಂದರಲ್ಲಿ ಕಾಯುತ್ತಿದ್ದ ತನ್ನ ಗೆಳೆಯರನ್ನು ಸೇರಲು ವೇಗವಾಗಿ ಹೋಗುತ್ತಿದ್ದಾಗ ಈ ಅಧ್ಯಾಪಕಿ ಮಕ್ಕಳನ್ನು ಕರೆದುಕೊಂಡು ರಸ್ತೆ ದಾಟಲು ಹೋಗಿದ್ದು ತಪ್ಪು. ರಸ್ತೆ ಈಕೆಯದೊಬ್ಬಳದೇ ಅಲ್ಲ. ಅದು ಒತ್ತಟ್ಟಿಗಿರಲಿ, ಕಾರು ಮಂತ್ರಿಯ ಮಗನದಾಗಿದ್ದರೂ ಆ ಸಂದರ್ಭದಲ್ಲಿ ಕಾರು ಓಡಿಸುತ್ತಿದ್ದದ್ದು ಮಂತ್ರಿಯ ಮಗನಲ್ಲವೆಂಬುದಕ್ಕೆ ಸಾಕ್ಷಿಯಾಗಿ ಇಪ್ಪತ್ತು ಜನರು ಸಹಿ ಹಾಕಿದ ಮಹಜರು ಇಲ್ಲಿದೆ. ಪೊಲೀಸರು ಕೂಡ ಆಕ್ಸಿಡೆಂಟ್ ಆದ ಬಗ್ಗೆ ವರದಿಯನ್ನು ಸಲ್ಲಿಸಿಲ್ಲ. ಹಾಗಾಗಿ ಈಕೆ ಮಾಡುತ್ತಿರುವ ಆಪಾದನೆಯನ್ನು ಮನ್ನಿಸಬಾರದೆಂದು ನನ್ನ ಕ್ಲೈಂಟ್ ಪರವಾಗಿ ಬಿನ್ನವಿಸುತ್ತಿದ್ದೇನೆ'. ಇಬ್ಬರ ಮಾತುಗಳನ್ನು ಕೇಳಿದ ನ್ಯಾಯಪೀಠ 'ಫಿರ್ಯಾದುದಾರಳು ಸಾಕ್ಷ್ಯಾಧಾರಗಳನ್ನು ಕೋರ್ಟಿಗೆ ಸಲ್ಲಿಸಲು ವಿಫಲರಾಗಿರುವುದರಿಂದ, ಆಕೆಯ ಆಪಾದನೆಯನ್ನು ತಿರಸ್ಕರಿಸಿ ಪ್ರಕರಣವನ್ನು ಮುಕ್ತಾಯಮಾಡಲಾಗಿದೆ' ಎಂದು ಘೋಷಿಸಿತು.

ಕೇಸ್ ನಂಬರ್ ಎರಡು: ಇಲ್ಲಿ ಫಿರ್ಯಾದುದಾರ ಪೊಲೀಸ್ ಇಲಾಖೆಯಾದ್ದರಿಂದ ಸರ್ಕಾರಿ ವಕೀಲರು ವಾದ ಮಂಡಿಸಿದ್ದರು. 'ಮಹಾಸ್ವಾಮಿ, ಈ ಬಿಲ್ಡರ್‌ಗೆ ಸೇರಿದ ಹತ್ತು ಅಂತಸ್ತುಗಳ ಅಪಾರ್ಟ್‌ಮೆಂಟ್ ಕುಸಿದು ಬಿದ್ದು ಹನ್ನೆರಡು ಜನ ಸತ್ತುಹೋಗಿದ್ದಾರೆ. ಸತ್ತ ಕುಟುಂಬದವರಿಗೆ ಯಾವ ಪರಿಹಾರವೂ ಕೊಟ್ಟಿಲ್ಲ ಮತ್ತು ಅಪಾರ್ಟ್‌ಮೆಂಟ್ ಬಿಟ್ಟು ಹೋದ ನೂರಾರು ಜನರಿಗೆ ಬೇರೆ ಅಪಾರ್ಟ್‌ಮೆಂಟ್‌ಗಳನ್ನೂ ಕೊಡಲಿಲ್ಲ. ಇದೆಲ್ಲ ನಡೆದು ಮೂರು ವರ್ಷಗಳೇ ಉರುಳಿದವು. ದಯಮಾಡಿ ಎಲ್ಲರಿಗೂ ಪರಿಹಾರವನ್ನು ಕೊಡಿಸಿ, ಈ ಬಿಲ್ಡರನನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ'. ಆಗ ಬಿಲ್ಡರ್ ಪರ ವಕೀಲ ತನ್ನ ವಾದ ಮಂಡಿಸಿದ್ದ. 'ಮಹಾಸ್ವಾಮಿ, ನನ್ನ ಕಕ್ಷಿದಾರನಾದ ಬಿಲ್ಡರ್ ಹೊಸದಾಗಿಯೇನೂ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿಲ್ಲ . ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಈ ಫೀಲ್ಡ್‌ನಲ್ಲಿ ಇದ್ದು, ಇಪ್ಪತ್ತು ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದಾರೆ. ಅವುಗಳಲ್ಲಿ ಒಂದೇ ಒಂದು ಸಣ್ಣ ಗೋಡೆಯಲ್ಲೂ ಬಿರುಕು ಕಾಣಿಸಿಕೊಂಡಿಲ್ಲ. ಕುಸಿದ ಅಪಾರ್ಟ್‌ಮೆಂಟನ್ನು ಸರ್ಕಾರದ ರೀತಿನೀತಿ, ಆದೇಶಗಳಿಗನುಗುಣವಾಗಿಯೇ ಕಟ್ಟಲಾಗಿರುವ ಬಗ್ಗೆ ಎಲ್ಲ ದಾಖಲೆಗಳು ಇಲ್ಲೇ ಇವೆ. ಮಹಾನಗರ ಪಾಲಿಕೆಯ ಇಂಜಿನಿಯರ್‌ಗಳೇ ವಾಸಯೋಗ್ಯದ ಪ್ರಮಾಣಪತ್ರ ನೀಡಿದ್ದಾರೆ. ಇದರಲ್ಲಿ ನನ್ನ ಕಕ್ಷಿದಾರನ ತಪ್ಪು ಲವಲೇಶವೂ ಇಲ್ಲ. ಅಪಾರ್ಟ್‌ಮೆಂಟ್ ಕುಸಿದಿರುವುದರಿಂದ ಏನೂ ತಪ್ಪು ಮಾಡದ ನನ್ನ ಕಕ್ಷಿದಾರನಿಗೇ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ. ಆ ಬಗ್ಗೆ ಸರ್ಕಾರದ ವತಿಯಿಂದ ಇನ್ನೂ ತನಿಖೆ ಮುಂದುವರೆದಿದೆ. ಮಾನವೀಯತೆಯ ದೃಷ್ಟಿಯಿಂದ ನನ್ನ ಕಕ್ಷಿದಾರ ಘಟನೆಯಲ್ಲಿ ಪ್ರಾಣ ಕಳೆದುಕೊಂಡ ಕುಟುಂಬದವರಿಗೆ ತಲಾ ಐವತ್ತು ಸಾವಿರ ರೂಪಾಯಿ ಪರಿಹಾರ ಧನವನ್ನು ನೀಡಲು ಸಿದ್ಧನಿದ್ದಾನೆ'. ವಾದ ಮಂಡಿಸುವಾಗ ನ್ಯಾಯವಾದಿಯ ಕಂಠ ಜೋರಾಗಿತ್ತು. ಆತ ನಗರದ ಪ್ರಖ್ಯಾತ ನ್ಯಾಯವಾದಿಯೆಂದು ಹೆಸರು ಪಡೆದವನಾಗಿದ್ದ. ನ್ಯಾಯಪೀಠವು ಒಂದೈದು ನಿಮಿಷ ಆಲೋಚಿಸಿ, 'ಪ್ರಕರಣವನ್ನು ಮುಂದೂಡಲಾಗಿದೆ' ಎಂದು ಘೋಷಿಸಿತ್ತು.



ಕೇಸ್ ನಂಬರ್ ಮೂರು: ಸುಮಾರು ಐವತ್ತೈದು ವರ್ಷ ವಯಸ್ಸಿನ ಹೆಣ್ಣುಮಗಳು ಎದ್ದು ನಿಂತಳು. ಅತ್ತು ಅತ್ತು ಅವಳ ಕಣ್ಣುಗಳು ಕೆಂಪಗಾಗಿವೆ. ಎರಡೂ ಕೈ ಜೋಡಿಸಿ ನಮಸ್ಕರಿಸಿ, 'ದಯಾಮಯನಾದ ನ್ಯಾಯಪ್ರಭುವೇ, ನನ್ನ ಸುಂದರವಾದ ಕರುಳಕುಡಿಯನ್ನು ಎರಡು ವರ್ಷಗಳ ಹಿಂದೆ ಈ ದುಷ್ಟರು ಬೆಂಕಿ ಹಚ್ಚಿ ನಿರ್ದಯವಾಗಿ ಕೊಂದುಬಿಟ್ಟರು. ಅಯ್ಯಾ ಸತ್ಯದೇವರೇ, ಶ್ರೀಮಂತರ ಮನೆಯಲ್ಲಿ ಸುಖವಾಗಿರುತ್ತಾಳೆಂದು ನನ್ನ ಒಬ್ಬಳೇ ಮಗಳನ್ನು ಮನೆ, ಬಂಗಾರ, ವರದಕ್ಷಿಣೆ, ಕಾರು ಎಲ್ಲವನ್ನೂ ಕೊಟ್ಟು ಮದುವೆ ಮಾಡಿಕೊಟ್ಟೆವು. ಆದರೆ ನ್ಯಾಯ ಶ್ರೇಷ್ಠನೇ, ನನ್ನ ಮಗಳು ತಿಂಗಳಾದರೂ ಆ ಮನೆಯಲ್ಲಿ ಸುಖವಾಗಿರಲಿಲ್ಲ. ಪೀಡಿಸಿದಾಗಲೆಲ್ಲ ವರದಕ್ಷಿಣೆಯನ್ನು ಕೊಡುತ್ತಿದ್ದೆವು. ಕಡೆಗೆ ನಮ್ಮ ಎಲ್ಲಾ ದುಡಿಮೆಯನ್ನೂ ಧಾರೆಯೆರೆದುಬಿಟ್ಟೆವು. ಆದರೂ ನನ್ನ ಮಗಳನ್ನು ಇವರು ಉಳಿಸಲಿಲ್ಲ. ನನ್ನ ಮಗಳು ಸಾಯುವಾಗ ನಾಲ್ಕು ತಿಂಗಳ ಬಸುರಿ. ನಮಗೆ ಯಾವುದೇ ರೀತಿಯ ಪರಿಹಾರ ಬೇಡ. ನನ್ನ ಮಗಳು ನರಳಿ ನರಳಿ ಪ್ರಾಣಬಿಟ್ಟಂತೆ ಇವರೂ ನರಳುತ್ತಾ ಸಾಯಬೇಕು...' ಆಕೆಯ ಮಾತು ನಿಂತವು. ಆಗ ಖ್ಯಾತ ನ್ಯಾಯವಾದಿಯೊಬ್ಬರು ಎದ್ದು ನಿಂತು, 'ಸ್ವಾಮಿ, ಇವರು ಇಲ್ಲಸಲ್ಲದ ಆರೋಪ ಮಾಡುತ್ತಿರುವ ನನ್ನ ಕಕ್ಷಿದಾರರು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು. ಆಗರ್ಭ ಶ್ರೀಮಂತರಾದ ಅವರಿಗೆ ಇವರು ಏನೂ ಕೊಡುವುದು ಬೇಕಿರಲಿಲ್ಲ. ಇವರ ಮಗಳಿಗೆ ಮದುವೆಗೆ ಮುಂಚೆಯೇ ಬೇರೊಬ್ಬ ಯುವಕನೊಂದಿಗೆ ಲವ್ ಅಫೇರ್ ಇತ್ತಂತೆ. ಅದಕ್ಕೆ ಸಂಬಂಧಿಸಿದ ಫೋನ್ ಮೆಸೇಜ್ ಡೀಟೈಲ್ಸ್ ತಮ್ಮ ಮುಂದೆ ಹಾಜರಿಪಡಿಸುತ್ತಿದ್ದೇನೆ. ಮತ್ತು ಅವಳಿಗೆ ಮೆಂಟಲ್ ಸಮಸ್ಯೆ ಕೂಡ ಇತ್ತಂತೆ. ಹಾಗಾಗಿ ತಮ್ಮ ಆಸ್ತಿಪಾಸ್ತಿಯನ್ನು ಮಗಳ ಗಂಡನ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಅತಿ ಮುಖ್ಯವಾದ ವಿಷಯವೆಂದರೆ ಆತ್ಮಹತ್ಯೆ ಮಾಡಿಕೊಂಡಿರುವ ಇವರ ಮಗಳು ತನ್ನ ಸಾವಿಗೆ ಯಾರೂ ಕಾರಣರಲ್ಲವೆಂದು, ಸ್ವಇಚ್ಛೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತನ್ನ ಸ್ವಹಸ್ತಾಕ್ಷರಗಳಲ್ಲಿ ಡೆತ್ ನೋಟ್ ಬರೆದಿಟ್ಟಿದ್ದಾಳೆ. ನನ್ನ ಕಕ್ಷಿದಾರರು ಆತ್ಮಹತ್ಯೆ ಮಾಡಿಕೊಂಡ ಇವರ ಮಗಳ ಹೆಸರಿನಲ್ಲಿ ಖರೀದಿಸಿರುವ ಒಡವೆ ವಸ್ತ್ರಗಳ ಮೌಲ್ಯವೇ ಕೋಟಿಗಳಷ್ಟಾಗುತ್ತದೆ. ಎಲ್ಲಾ ಖರೀದಿ ಬಿಲ್ಲುಗಳೂ ಇಲ್ಲಿವೆ. ಅಲ್ಲದೆ ಅವಳಿಗೆ ಚಿಕಿತ್ಸೆ ಕೊಡಿಸಿರುವ ಪ್ರತಿಷ್ಠಿತ ನರ್ಸಿಂಗ್ ಹೋಂ ಬಿಲ್ಲುಗಳು, ಡಾಕ್ಟರ್ ಟಿಪ್ಪಣಿ ಬರಹಗಳೂ, ಅಡ್ವೈಸ್ ಬರಹಗಳೂ ಸಹಿಗಳ ಸಮೇತ ಹಾಜರುಪಡಿಸುತ್ತಿದ್ದೇನೆ. ಆದ್ದರಿಂದ ನನ್ನ ಕಕ್ಷಿದಾರರನ್ನು ಈ ಪ್ರಕರಣದಲ್ಲಿ ನಿರ್ದೋಷಿಯನ್ನಾಗಿ ಪರಿಗಣಿಸಬೇಕೆಂದು ಕೋರುತ್ತೇನೆ...' ಆ ನ್ಯಾಯವಾದಿ ವಾದಿಸುವುದರಲ್ಲಿ ಮಹಾನ್ ಚತುರ. ಕೋರ್ಟಿನಲ್ಲಿ ಒಮ್ಮೆ ಹಾಜರಾಗಲು ಇಪ್ಪತ್ತೈದು ಲಕ್ಷ ಫೀಜನ್ನು ಪಡೆಯುತ್ತಾನಂತೆ! ನ್ಯಾಯಪೀಠಕ್ಕೆ ಯೋಚಿಸಲು ಏನೂ ಇರಲಿಲ್ಲ. 'ಈ ಪ್ರಕರಣದಲ್ಲಿ ಫಿರ್ಯಾದುದಾರಳ ಬಳಿ ಯಾವುದೇ ಬಲವಾದ ಸಾಕ್ಷ್ಯವಿರದ ಕಾರಣ ಆಕೆಯ ಆರೋಪ ಮತ್ತು ನ್ಯಾಯಪೀಠಕ್ಕೆ ಸಲ್ಲಿಸಿದ ಮನವಿಯನ್ನು ತಳ್ಳಿ ಹಾಕಲಾಗಿದೆ. ಆಕೆ ಬೇಕಾದರೆ ದೇಶದ ರಾಷ್ಟ್ರಾಧ್ಯಕ್ಷರಲ್ಲಿ ಮರು ಮನವಿಯನ್ನು ಸಲ್ಲಿಸಬಹುದು...' ಎಂದು ನ್ಯಾಯಪೀಠ ಘೋಷಿಸಿತ್ತು.

ಕೇಸ್ ನಂಬರ್ ನಾಲ್ಕು: ಅವರು ಸುಮಾರು ಎಪ್ಪತ್ತು ವರ್ಷದ ಹಿರಿಯರು. ಎದ್ದು ನಿಂತು ನ್ಯಾಯಪೀಠಕ್ಕೆ ಕೈ ಮುಗಿದು, 'ಸ್ವಾಮಿ, ಈ ದೇಶದ ಬಡವರಿಗೆ, ಸಾಮಾನ್ಯ ಜನರಿಗೆ ಇಂಥ ಹೀನ ಸ್ಥಿತಿ ಒದಗುತ್ತದೆಂದು ಯಾರೂ ಎಣಿಸಿರಲಿಲ್ಲ. ಈ ನಗರದ ಸುತ್ತಮುತ್ತಲಿನ ಸಾವಿರಾರು ಜನರನ್ನು ಹೆದರಿಸಿ ಬೆದರಿಸಿ ಅವರ ಲಕ್ಷಾಂತರ ಎಕರೆ ಜಮೀನುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿ ಸೈಟು, ಪ್ಲಾಟುಗಳನ್ನಾಗಿ ಬದಲಾಯಿಸಿ ಕೋಟಿ ಕೋಟಿ ಲಾಭ ಕೊಳ್ಳೆ ಹೊಡೆಯುತ್ತಿದ್ದಾರೆ. ಇವರಲ್ಲಿ ಬಹುತೇಕ ಕಂಟ್ರಾಕ್ಟುದಾರರೂ ಇದ್ದಾರೆ. ದಾಖಲೆಗಳಲ್ಲಿ ಮಾತ್ರ ಕೆಲಸ ತೋರಿಸಿ ಸಾರ್ವಜನಿಕರ ತೆರಿಗೆ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಬಹುತೇಕ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಇವರಿಗೇ ಸೇರಿವೆ. ಜನಸಾಮಾನ್ಯರ ರಕ್ತವನ್ನು ಹೀರಿ ಹಿಪ್ಪೆ ಮಾಡುತ್ತಿದ್ದಾರೆ. ಇವರಿಗೆ ಎಲ್ಲಾ ಪಕ್ಷಗಳ ರಾಜಕಾರಣಿಗಳ, ಎಲ್ಲಾ ಇಲಾಖೆಯ ಅಧಿಕಾರಿಗಳ ಬೆಂಬಲ ಇದೆ. ಅಂಥವರ ವಿವರಗಳೆಲ್ಲವೂ ಈ ಪಟ್ಟಿಯಲ್ಲಿ ಇವೆ. ದಯವಿಟ್ಟು ಇವರಿಗೆಲ್ಲಾ ನೇಣುಶಿಕ್ಷೆಯನ್ನು